ಇಲ್ಲದೆ ಎಲ್ಲರೂ ಹಿಂದಿರುಗಲು ಯೋಚಿಸತೊಡಗಿದೆವು. ವ್ಯವಸ್ಥಾಪಕರ ಬಳಿ ಹಾಗೂ ನಮ್ಮಲ್ಲಿಯೆ ಉಳಿದಿದ್ದ ಅಲ್ಪಸ್ವಲ್ಪ ಹಣವನ್ನು ಕೂಡಿ ಹಾಕಿದೆವು. ಎಲ್ಲರೂ ಒಟ್ಟಾಗಿ ಹೋಗುವುದು ಒಳಿತೆಂದು ಒಂದು ದಿನವನ್ನು ನಿಗದಿ ಪಡಿಸಿ, ಬೇಕಾದ ಎಲ್ಲ ಏರ್ಪಾಡುಗಳನ್ನು ಮಾಡಲಾಯಿತು. ಎಂಟು ತಿಂಗಳ ಹಿಂದೆ ಹುಟ್ಟಿದ ಮಕ್ಕಳು, ಕೆಲವರು ಕೇವಲ ಮೂರು ತಿಂಗಳ ಹಿಂದೆ ಹುಟ್ಟಿದ ಎಳೆ ಹಸುಳೆಗಳು ಎಲ್ಲರೂ ಇದ್ದರು. ಮಕ್ಕಳೊಂದಿಗೆ ಎಲ್ಲ ಹೆಂಗಸರೂ ಒಟ್ಟಿಗೆ ಒಂದು ಗುಂಪಾಗಿ ಹಿಂದಿರುಗುವ ದಿನ ಬಂದೇ ಬಿಟ್ಟಿತು. ನಮ್ಮನ್ನು ಟಿಬೆಟ್‌ನ ಗಡಿಯವರೆಗೆ ಕರೆದೊಯ್ಯಲು ಹೇಸರಗತ್ತೆಗಳನ್ನೂ ಗೊತ್ತುಪಡಿಸಲಾಗಿತ್ತು. ಆದರೆ ನನ್ನ ಅದೃಷ್ಟವೋ ದುರದೃಷ್ಟವೋ ಹಿಂದಿನ ದಿನವೇ ನನಗೆ ತಡೆಯಲಾರದ ಹೊಟ್ಟೆ ಬೇನೆ ಪ್ರಾರಂಭವಾಗಿ ಎಲ್ಲರ ಸೂಚನೆಯ ಮೇರೆಗೆ ಹಿಂದೆ ಉಳಿಯಬೇಕಾಗಿ ಬಂತು. ಮಿಕ್ಕ ಎಲ್ಲರೂ ಹೊರಟರು. ಏಳು ತಿಂಗಳ ನಿಮ್ಮ ತಂದೆಯ ಜೊತೆ ನಾನು ಅದೇ ಊರಿನಲ್ಲಿ ಕೆಲವು ಆಶ್ರಯದಾತರ ಜೊತೆ ಉಳಿದುಕೊಂಡೆ.

ಸುಮಾರು ಒಂದು ವರ್ಷದ ಮೇಲೆಯೇ ಕಳೆಯಿತು. ನಿಮ್ಮ ತಂದೆಗೆ ಅಷ್ಟರಲ್ಲಿ ಸುಮಾರು ಎರಡು ವರ್ಷ. ಆಗ ನನ್ನನ್ನು ಕಾಣಲೆಂದು ಕೆಲವು ಭಿಕ್ಕುಗಳು ಬಂದರು. ನನ್ನನ್ನು ಲಾಸಾಗೆ ಕರೆದೊಯ್ಯಲು ಬಂದಿರುವುದಾಗಿಯೂ ಗುರುಗಳು ನನ್ನನ್ನು ಕರೆತರಲೆಂದು ತಮ್ಮನ್ನು ಕಳುಹಿಸಿರುವರೆಂದೂ ಹೇಳಿದಾಗ, ನನಗೆ ವಿಶ್ವಾಸ ಮೂಡಲಿಲ್ಲ. ಯಾವುದೇ ಖಚಿತತೆ ಇಲ್ಲದೆ, ಅವರ ಬಗ್ಗೆ ಏನೂ ತಿಳಿಯದೆ ಅವರನ್ನು ನಂಬಿ ಹೇಗೆ ಹೋಗಲಿ. ನನ್ನ ವಿಷಯ ಗುರುಗಳಿಗೆ ಹೇಗೆ ತಿಳಿಯಿತೆಂದು ಕೇಳಿದೆ. ಅವರಿಗೂ ಸಂಪೂರ್ಣ ವಿವರಗಳು ತಿಳಿದಿರಲಿಲ್ಲ. ಹಾಗಾಗಿ ಅವರು ಯಾರೆಂದು ತಿಳಿಯದೆ ಯಾವುದೇ ತೀರ್ಮಾನಕ್ಕೂ ಬರಲಾಗಲಿಲ್ಲ. ಈಗಾಗಲೆ ನಾನು ಅನುಭವಿಸಿದ್ದ ಅನಿಶ್ಚಿತತೆಗಳ ಹಿನ್ನೆಲೆಯಲ್ಲಿ ಅವರೊಂದಿಗೆ ಹೋಗಲು ಹಿಂಜರಿಕೆಯಾಯಿತು. ಜೊತೆಗೆ ಆ ಭಿಕ್ಕುಗಳಿಗೂ ಎಲ್ಲ ವಿವರಗಳು ತಿಳಿಯದಿದ್ದುದರಿಂದ, ಗುರುಗಳ ಕರೆ ನನ್ನ ಒಳಿತಿಗಾಗಿಯೆ ಎಂದು ಅವರೂ ನನ್ನಲ್ಲಿ ವಿಶ್ವಾಸ ತುಂಬುವಲ್ಲಿ ಸಫಲರಾಗಲಿಲ್ಲ. ಹಾಗಾಗಿ ಒಂದು ತೀರ್ಮಾನಕ್ಕೆ ಬಂದೆ. ಹೇಗೂ ನನ್ನ ಜೀವನ ಅಲ್ಲೋಲ ಕಲ್ಲೋಲವಾಗಿದೆ. ತೊಂದರೆಗಳು ಎದುರಾದರೆ ಅವನ್ನು ನಾನು ಎದುರಿಸಲು ಸಿದ್ಧ. ಆದರೆ ನನ್ನ ಮಗನನ್ನು ಇನ್ನು ಯಾವುದೇ ಅನಿಶ್ಚಿತ ಭವಿಷ್ಯದತ್ತ ಒಯ್ಯುವುದು ಬೇಡ ಎಂದು ತೀರ್ಮಾನಿಸಿ, ಆ ಹಳ್ಳಿಯಲ್ಲಿ ನನಗೆ ಆಸರೆಯಾಗಿದ್ದ ಕುಟುಂಬದ ಮಡಿಲಿಗೆ ಹಾಕಿ ಹೊರಟು ಬಿಟ್ಟೆ. ಸಾಧ್ಯವಾದರೆ, ಲಾಸಾದಲ್ಲಿ ಜೀವನ ಸುಗಮವಾಗಿದ್ದರೆ ಮತ್ತೆ ಬಂದು ಕಂದನನ್ನು ಕರೆದೊಯ್ಯುವ ಯೋಚನೆಯಿಂದ.

ಲಾಸಾಗೆ ಬಂದು ಗುರುಗಳನ್ನು ಕಂಡಾಗ ನನ್ನ ದುಗುಡವೆಲ್ಲ ಮಾಯವಾಯಿತು. ಗುರುಗಳು ಅಂದು ಯುವ ವಯಸ್ಕರು. ಆಶ್ಚರ್ಯ ಎಂದರೆ ನನ್ನ ಕಥೆ ವ್ಯಥೆಯನ್ನೆಲ್ಲ ಹೇಳಿಕೊಳ್ಳುತ್ತಿದ್ದಂತೆ ಅವರೆ ತಮಗೆ ಎಲ್ಲ ತಿಳಿದಿದೆಯೆಂದು ಹೇಳಿ, ನನ್ನನ್ನು ಸಮಾಧಾನಪಡಿಸಿದರು. ನಾನು ಮಗುವನ್ನು ಬಿಟ್ಟು ಬಂದುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ವಿಹಾರದಲ್ಲಿಯೆ ತಂಗಲು ವ್ಯವಸ್ಥೆ ಮಾಡಲಾಯಿತು. ಅಲ್ಲಿಗೆ ಹೋದ ಮೂರು ದಿನಗಳ ನಂತರ ದಾಹ್‌ನಿಂದ ನನ್ನನ್ನು ಕರೆತರಲು ಭಿಕ್ಕುಗಳನ್ನು ಕಳುಹಿಸಿದ ಕಾರಣ ತಿಳಿಯಿತು.

ದಾಹ್‌ನಿಂದ ಹೊರಟ ಹೆಂಗಸರು ಮತ್ತು ಮಕ್ಕಳು ಒಟ್ಟಿಗೆ ಇದ್ದುದ್ದೆ ಅವರಿಗೆ